5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 03.09.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 9 ಪಿ. ಡಬ್ಲ್ಯೂ:10

| | |
|---|---|
| ಸಾಕ್ಷಿದಾರರ ಹೆಸರು | ಮಹದೇವಪ್ಪ |
| ತಂದೆಯ ಹೆಸರು | ಬೊಕ್ಕಳ |
| ವಯಸ್ಸು | 59 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ನೆಟ್ಟಕಲ್ಲು ಗ್ರಾಮ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಸಾಕ್ಷಿಗೆ ನಿಪಿ.11 ಶವ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ.11(ಇ) ಎಂದು ಗುರುತಿಸಲಾಯಿತು.
2. ಸದರಿ ನಿಪಿ.11(ಇ) ಸಹಿಯನ್ನು ಸುಮಾರು 3 ವರುಷಗಳ ಹಿಂದೆ ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿರುತ್ತೇನೆ. ಆರೋಪಿಯ ಹೆಂಡತಿ ಮಹದೇವಮ್ಮರವರು ಸುಟ್ಟ ಗಾಯಗಳಿಂದ ತೀರಿಕೊಂಡ ವಿಚಾರದಲ್ಲಿ ಶವ ತನಿಖೆಯನ್ನು ಮಾಡಿದಾಗ ನನ್ನ ಸಹಿಯನ್ನು ಪೊಲೀಸರು ಪಡೆದುಕೊಂಡಿದ್ದರು. ಸದರಿ ಆರೋಪಿಯ ಹೆಂಡತಿ ಮಹದೇವಮ್ಮ ರವರಿಗೆ ಅವರ ಮನೆಯಲ್ಲಿ ಸುಟ್ಟ ಗಾಯಗಳಾಗಿತ್ತು. ಸಾಕ್ಷಿಯು ನಿಪಿ.20 ರಿಂದ 23 ಫೋಟೊಗಳಲ್ಲಿ ಇರುವ ಮೃತೆ ಮಹದೇವಮ್ಮ ರವರನ್ನು ನೋಡಿ ಗುರುತಿಸಿರುತ್ತಾರೆ. ಈ ಪ್ರಕರಣದಲ್ಲಿ ಆರೋಪಿ ಸಿದ್ದೇಗೌಡರ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ.
3. ಸಾಕ್ಷಿಗೆ ಶವ ಪಂಚನಾಮೆ ನೋಟಿಸನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಶವ ಪಂಚನಾಮೆ ನೋಟಿಸನ್ನು 24 ಎಂದು, ಸಾಕ್ಷಿಯ ಸಹಿಯನ್ನು ನಿಪಿ.24(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಕೆ ಟಿ ಎಸ್ ವಕೀಲರು, chief defence counsel ರವರಿಂದ ಃ</u>**

4. ಶವ ಪಂಚನಾಮೆಯಲ್ಲಿ ಬರೆದ ವಿವರಗಳು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಹಾಕು ಎಂದು ಹೇಳಿದ್ದರಿಂದ, ನಾನು ಸಹಿ ಹಾಕಿರುತ್ತೇನೆ ಎಂದರೆ ಸಾಕ್ಷಿಯು, ನಾವು ಸದರಿ ಆಸ್ಪತ್ರೆಗೆ ಹೋಗಿದ್ದೆವು, ಆಗ ನಾನು ಸಹಿ ಮಾಡಿದ್ದೆನು ಎಂದು ಹೇಳುತ್ತಾರೆ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.